# ನರಸಿಂಹರಾಜು ನನಗೆ ಸ್ಫೂರ್ತಿ



## ವಿನೋದ ಗೊಬ್ಬರಗಾಲ

### ಕಲರ್ಸ್ ಸೂಪರ್‌ನ 'ಸಿಲ್ಲಿಲಲ್ಲಿ'ಯ ಕಾಂಪೌಂಡರ್ ಕೋತಿ ಗೋವಿಂದ

◆ **ನಿಮ್ಮ ನಟನಾ ಪಯಣದ ಹಾದಿಯನ್ನು ನೆನಪಿಸಿ...**

ಹೆಚ್ಚಿನ ಶಿಕ್ಷಣವನ್ನು ಪಡೆಯಲಿಲ್ಲ. ಮರಗೆಲಸ ಮಾಡುತ್ತಾ ಇದ್ದೆ. ರಂಗಭೂಮಿಯ ಅನುಭವವೂ ಇಲ್ಲ, ನಟನೆಗೆ ಸಂಬಂಧಿಸಿದಂತೆ ತರಬೇತಿಯನ್ನೂ ಪಡೆಯಲಿಲ್ಲ. ಆಸಕ್ತಿ ಮಾತ್ರ ಇತ್ತು. ನನ್ನ ಸಂಬಂಧಿಯೊಬ್ಬರು ಟೀವಿಗೆ ಪರಿಚಯಿಸುತ್ತೇನೆ ಎಂದು ವಂಚಿಸಿದ್ದರು. ನಂತರ ನನ್ನ ಆಸಕ್ತಿಯನ್ನು ಗುರುತಿಸಿ ನಮ್ಮ ಚಿಕ್ಕಮ್ಮ ಶೋಭಾ ಬೆಂಗಳೂರಿಗೆ ಕರೆದುಕೊಂಡುಬಂದರು. ಅವರೂ ನಟಿಯಾಗಿದ್ದರಿಂದ ಕಿರುತೆರೆಯನ್ನು ಬಲ್ಲವರಾಗಿದ್ದರು. ಕ್ಯಾಮೆರಾ ಸಹಾಯಕನಾಗಿ ಕೆಲಸವನ್ನು ಆರಂಭಿಸಿದೆ. ನನಗೆ ಆಸೆ ಇದ್ದಿದ್ದು ನಟ ಆಗಬೇಕು ಎನ್ನುವುದು. ಆದರೆ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಚಿತ್ರೀಕರಣದ ಸಂದರ್ಭದಲ್ಲಿ ನನ್ನಷ್ಟಕ್ಕೆ ನಾನಾಗಿದ್ದರೆ ಹೇಗೆ ನಟಿಸುತ್ತಿದ್ದೆ ಎಂದು ಯೋಚಿಸುತ್ತಿದ್ದೆ. ನಮ್ಮ ಮನೆಯಲ್ಲಿ ಸಮಸ್ಯೆ ತುಂಬ ಜಾಸ್ತಿಯಾಯಿತು. ಆಗ ನನಗೆ ಸಂಪಾದನೆ ಅನಿವಾರ್ಯವಾಗಿ ಬೇರೆ ಕೆಲಸವನ್ನು ಹುಡುಕಿಹೊರಟೆ. ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣ ಗೌಡರ ಬಳಿ ಕೆಲಸಕ್ಕೆ ಸೇರಿದೆ. ಅವರು ನನ್ನ ಆಸಕ್ತಿಯನ್ನು ಮನಗಂಡು ನನ್ನಾಸೆಯನ್ನು ಹುರಿದುಂಬಿಸಿದರು. ಕಲರ್ಸ್ ಸೂಪರ್‌ನಲ್ಲಿ 'ಮಜಾಭಾರತ'ಕ್ಕೆ ಆಡಿಷನ್ನಿಗೆ ಹೋದೆ. ಒಮ್ಮೆ ಅಲ್ಲ ಐದು ಬಾರಿ ರಿಜೆಕ್ಟ್ ಮಾಡಿದರು. ನಿನಗೆ ಭಾವನೆ ಪ್ರಕಟಿಸಲು ಬರಲ್ಲ, ಡೈಲಾಗ್ ಹೇಳ್ತಿಯ ನಟನೆ ಬರಲ್ಲ ಹೀಗೆ ಏನೇನೋ ಕಾರಣಗಳನ್ನು ನೀಡುತ್ತಿದ್ದರು. ಛಲಬಿಡದೆ ಕೊನೆಗೂ ಅಲ್ಲೇ ಒಂದು ಪಾತ್ರವನ್ನು ಗಿಟ್ಟಿಸಿಕೊಂಡೆ. 'ಗೊಬ್ಬರಗಾಲ' ಪಾತ್ರದ ಮೂಲಕ ಪರಿಚಿತನಾದೆ. ಗೊಬ್ಬರಗಾಲ ನನ್ನ ಊರು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಹೋಬಳಿಯಲ್ಲಿ ಬರುವ ಪುಟ್ಟ ಹಳ್ಳಿ. ನನ್ನೂರ ಹೆಸರಿನ ಮೂಲಕವೇ ನನ್ನನ್ನು ಗುರುತಿಸಿಕೊಳ್ಳುವ ಭಾಗ್ಯವೂ ನನಗೆ ಬಂದಿದೆ. ಇದು ನನ್ನ ಎರಡನೇ ಧಾರಾವಾಹಿ.

◆ **ನಿಮಗೆ ಗಂಭೀರ ಇಲ್ಲವೇ ರಮ್ಯ ಪಾತ್ರ ಮಾಡುವ ಆಸೆ ಇಲ್ಲವೆ?**

ಗಂಭೀರವಾಗಿ ನಟಿಸಿದರೂ ನನ್ನ ಸಹನಟರು ನಗುತ್ತಾರೆ. ನಾನು ಏನೇ ಹೇಳಿದರೂ ನನ್ನ ಜೊತೆಗಾರರು ನಗುವುದು ಸಾಮಾನ್ಯ ಎನ್ನುವಂತಾಗಿದೆ. ನನ್ನ ಧ್ವನಿ ಹಾಸ್ಯಕ್ಕೆ ಹೊಂದಿಕೊಂಡಿದೆ. ದುಃಖದ ಸನ್ನಿವೇಶವನ್ನು ಭಾವುಕನಾಗಿ ಮಾಡಿದ್ದೇನೆ. ಆದರೆ ಹಾಸ್ಯ ನಟನೇ ಆಗಬೇಕು ಎನ್ನುವುದು ನನ್ನ ಮನದಾಳದ ಬಯಕೆ. ನನ್ನನ್ನು ಬಲ್ಲವರೆಲ್ಲಾ ಕಾಮಿಡಿ ಮಾಡಿ ಮಾಡಿ ಅದನ್ನೇ ರೂಢಿಸಿಕೊಂಡಿದ್ದಿಯಾ ಎಂದು ಪ್ರಶಂಸಿಸಿದ್ದಾರೆ. ನಾಲ್ಕು ಜನರನ್ನು ಅಳಿಸಬಹುದು, ನಗಿಸುವುದು ಕಷ್ಟ ಎನ್ನುತ್ತಾರೆ. ನನ್ನ ತಾಯಿ ಎಷ್ಟೇ ಬೇಸರದಲ್ಲಿ ಇದ್ದರೂ ನಾನು ಅವರನ್ನು ಮಾತಿಗೆಳೆದರೆ ಇದ್ದಕ್ಕಿದ್ದಂತೆ ನಗುತ್ತಾರೆ. ಸಿಹಿಕಹಿ ಚಂದ್ರು ಅವರೂ ನನಗೆ ಮಾದರಿಯಾಗಿದ್ದಾರೆ. ನಿರ್ದೇಶನ ಮಾಡುವಾಗ ನಾನು ಏನಾದರೂ ಸಲಹೆ ಹೇಳಿದರೆ ಅವರು ಮೆಚ್ಚುಗೆ ವ್ಯಕ್ತಪಡಿಸಿ ಅದನ್ನು ಮಾಡಲು ಹೇಳುತ್ತಾರೆ. ಸಹನಟರ ಬೆಂಬಲ ಇದೆ. ಈಗ ನನ್ನ ನಟನೆಗೆ ರಂಗನಾಥ್ ಪಾತ್ರಧಾರಿ (ಜಗ್ಗು) ಸಹಕಾರಿಯಾಗಿದ್ದಾರೆ.

◆ **ನಟನೆಗೆ ನಿಮ್ಮನ್ನು ಕಾಡುವ ನಟರ ಬಗ್ಗೆ ಹೇಳುವುದಾದರೆ...**

ಇಲ್ಲಿ ಡಾಕ್ಟರ್ ಕಾಲೆಳೆಯುವ ಕೋತಿ ಗೋವಿಂದನ ಪಾತ್ರ ನನ್ನದು. ನಾನು ಮಾಡುವ ಕೆಲಸಕ್ಕೆ ಮಂಜು ಪಾಂಡವಪುರ ಸಹಾಯ ಮಾಡುತ್ತಾರೆ. ನಾವಿಬ್ಬರೂ ಸೇರಿ ರೂಪಿಸಿರುವ ಸ್ಕಿಟ್ ಸಾಮಾನ್ಯವಾಗಿ ಚೆನ್ನಾಗಿ ಮೂಡಿಬಂದಿವೆ. ಕಾಮಿಡಿ ನನಗಿಷ್ಟ. ನಟ ನರಸಿಂಹರಾಜು ನನಗೆ ದೊಡ್ಡ ಸ್ಫೂರ್ತಿ. ಅವರ ಸಿನಿಮಾ ತುಂಬ ನೋಡಿದ್ದೇನೆ. ನಂತರ ನಿರ್ದೇಶಕ– ನಿರ್ಮಾಪಕರಾಗಿರುವ ದ್ವಾರಕೀಶ್ ಇಷ್ಟ. ಅವರು ಎಂತಹ ಪಾತ್ರ ಇದ್ದರೂ ಮಾಡುತ್ತಾರೆ 'ಮುದ್ದಿನಮಾವ' ಸಿನಿಮಾದಲ್ಲಿ ಪುಟಗೋಸಿ ಹಾಕಿಕೊಂಡು ಭಿಕ್ಷುಕನ ಪಾತ್ರ ಮಾಡಿದ್ದರು. ಪಾತ್ರ ಎಂತಹದ್ದೇ ಆಗಿರಲಿ ಅದಕ್ಕೆ ಜೀವ ತುಂಬುತ್ತಾರೆ. ಅವರೂ ನನಗೆ ಆದರ್ಶ.

◆ **ಸ್ಕ್ರಿಪ್ಟ್– ಡೈಲಾಗ್ ಬರೆಯುತ್ತೀರಾ?**

ಬರೆಯುತ್ತೇನೆ. ಆದರೆ ನಾನು ಹೆಚ್ಚಿನ ಫೋಕಸ್ ನಟನೆಯತ್ತ ಕೇಂದ್ರೀಕರಿಸಿದ್ದೇನೆ. ಯಾವುದೇ ಕಥೆ ಕೊಟ್ಟರೂ ಹಾಸ್ಯದ ಸನ್ನಿವೇಶ ಸೃಷ್ಟಿಸಿ ಡೈಲಾಗ್‌ಗಳನ್ನು ನಿರೂಪಿಸುತ್ತೇನೆ. ಒಂದು ಕಥಾ ಭಾಗ ಮಾಡಿ. ಕಥೆ ಎಂದರೆ ಸುಮ್ಮನೆ ಬರೆಯುವುದಿಲ್ಲ. ಅಲ್ಲಿ ಪಂಚಿಂಗ್ ಇರಬೇಕು. ಯಾವುದೇ ಕಂಟೆಂಟ್ ತೆಗೆದುಕೊಂಡರೂ ಕಥೆಯಲ್ಲಿ ಪಂಚಿಂಗ್ ಮುಖ್ಯ ಎನ್ನುವುದು ನನ್ನ ಭಾವನೆ. ಆದರೆ ಅದರತ್ತ ಆಸಕ್ತಿ ತೋರಿಸಿಲ್ಲ.

◆ **ಸಿಲ್ಲಿ– ಲಲ್ಲಿಗೆ ಹೇಗೆ ತಯಾರಿ ಆಗುತ್ತೀರಿ?**

ಇದರಲ್ಲಿ ಬದಲಾಗುವ ಸನ್ನಿವೇಶ ಇದ್ದೇ ಇರುತ್ತದೆ. ಹಿಂದಿನ ದಿನ ರಾತ್ರಿಯೇ ಒಂದು ಲೈನ್ ಕಥೆ ಕೊಟ್ಟಿರುತ್ತಾರೆ. ಅದರಲ್ಲಿ ಒಬ್ಬ ಭಿಕ್ಷುಕನ ಪಾತ್ರ ಮಾಡಬೇಕು ಎಂದೇನಾದರೂ ಇದ್ದರೆ ರಾತ್ರಿಯಿಂದಲೇ ಅದಕ್ಕಾಗಿ ತಯಾರಿ ಮಾಡಿಕೊಳ್ಳುತ್ತೇನೆ. ನನ್ನ ಕಲ್ಪನಾ ಜಗತ್ತು ಅದಕ್ಕೆ ತೆರೆದುಕೊಳ್ಳುತ್ತದೆ. ಯಾವ ರೂಪದಲ್ಲಿ ಪಾತ್ರಕ್ಕೆ ಜೀವ ತುಂಬಬಹುದು ಎಂದು ಯೋಚಿಸುತ್ತೇನೆ. ಇಲ್ಲೂ ತುಂಬ ಪೈಪೋಟಿ ಇದೆ. ಯಾವತ್ತೂ ನನ್ನ ಪಾತ್ರವನ್ನು ಜನರಿಗೆ ತಲುಪಿಸಬೇಕು ಎಂದು ಯೋಚಿಸುತ್ತೇನೆ. ಅಂತೆಯೇ ಒಂದು ಗೆಟಪ್ ಇದೆ ಎಂದಾಗ ನಾನು ಹೇಗೆ ಜನರನ್ನು ತಲುಪಬಹುದು ಎಂದು ಯೋಚಿಸುತ್ತೇನೆ. ನಾನೂ ನಾಳೆಯ ಪಾತ್ರವನ್ನು ಇಂದೇ ತಿಳಿದುಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಂಡಿದ್ದೇನೆ. ಪಾತ್ರಕ್ಕೆ ಸಂಬಂಧಿಸಿದಂತೆ ಯೋಚಿಸುತ್ತೇನೆ ಅದನ್ನೇ ನಾನು ಪಾಲನೆ ಮಾಡಿಕೊಂಡುಬರುತ್ತೇನೆ.

'ಸಿಲ್ಲಿಲಲ್ಲಿ'ಯಲ್ಲಿ ಕಾಂಪೌಂಡರ್ ತುಂಬ ಮಹತ್ವದ ಪಾತ್ರ. ಹಿಂದೆ ಗೋವಿಂದು ಅಂದರೆ ಸಂಗಮೇಶ್ ಉಪಾಸೆ ನೆನಪಿಸುತ್ತಾರೆ. ಪಾತ್ರಕ್ಕೆ ಅವರು ಒಂದು ರೂಪ ಕೊಟ್ಟಿದ್ದಾರೆ. ಹೀಗಿರುವಾಗ ಆ ಪಾತ್ರವನ್ನು ನಾನು ನಿರ್ವಹಿಸುತ್ತೇನೆ ಅಂದರೆ ಪಾತ್ರ ಎಲ್ಲೂ ಸೋಲದಂತೆ ನೋಡಿಕೊಳ್ಳಲೇಬೇಕು. ನಾನು ಏನೇ ಹೇಳಿದರು ಕಾಮಿಡಿ ಎಂದೇ ಭಾವಿಸುತ್ತಾರೆ. ನನ್ನ ಬಂಧು ಬಳಗ ಎಷ್ಟೇ ಗಂಭೀರ ವಿಷಯವನ್ನು ಹೇಳಿದರೂ ಅದನ್ನವರು ತಮಾಷೆ ಎಂದೇ ತೆಗೆದುಕೊಳ್ಳುತ್ತಾರೆ. ಒಮ್ಮೆ ನಾನೇ ಇಬ್ಬರಿಗೆ ನಿಮ್ಮನ್ನು ಲವ್ ಮಾಡ್ತೀನಿ ಅಂದೆ. ಅವರಿಬ್ಬರೂ ನೀನು ಕಾಮಿಡಿ ಮಾಡ್ತೀಯಾ ಹೋಗು ಅಂದರು. ಅಂದರೆ ನನ್ನನ್ನು ಯಾರೂ ಸೀರಿಯಸ್ ಆಗೇ ತೆಗೆದುಕೊಳ್ಳುವುದಿಲ್ಲ.

■ **ರಾಘವೇಂದ್ರ ಕೆ.**